**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ.ಸಿ. 91/2026</u>**

<u>ಪಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ದ-

<u>ಆರೋಪಿ/ತರು</u> ಃ ಮಹಾಂತೇಶ್ ಸಿ ಆರ್ ಮತ್ತು ಇನ್ನೊಬ್ಬರು

<u>-ಃದೋಷಾರೋಪಣೆಃ-</u>

ಶ್ರೀ ಮುಜಫರ್ ಎ. ಮಾಂಜರಿ, ಬಿ.ಎ., ಎಲ್ ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮಹಾಂತೇಶ್ ಸಿ ಆರ್ ಬಿನ್ ರಂಗಪ್ಪ, 32 ವರ್ಷ, ವ್ಯವಸಾಯ, ವಾಸಃ ಚಾಕೋನಹಳ್ಳಿ ಗ್ರಾಮ, ತರೀಕೆರೆ ತಾಃ
2. ಶ್ರೀಮತಿ ಜ್ಯೋತಿ ಸಿ ಆರ್ ಕೋಂ ಮಾರುತಿ, 37 ವರ್ಷ, ರಾಜ್ ಬೃಹತ್ ಹಾಸ್ಪಿಟಲ್ ನಲ್ಲಿ ಸ್ಟಾಫ್ ನರ್ಸ್ ವೃತ್ತಿ, ವಾಸಃಆಸ್ಪತ್ರೆ ವಸತಿ ಗೃಹ, ತರೀಕೆರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ31.12.2025 ರಂದು ಮಧ್ಯಾಹ್ನ 2-00 ರ ಸಮಯದಲ್ಲಿ ಚಾಸಾ-1 ರವರ ಹೆಸರಿಗೆ 1ನೇ ಆರೋಪಿಯಾದ ನೀವು ಜೀವನಾಂಶಕ್ಕಾಗಿ ಚಾಕೋನಹಳ್ಳಿ ಗ್ರಾಮದ ಸ.ನಂ.67/2 ರಲ್ಲಿರುವ 1 ಎಕರೆ 17 ಗುಂಟೆ ಜಮೀನನ್ನು ಬಿಟ್ಟುಕೊಟ್ಟಿದ್ದು, ಸದರಿ ಜಮೀನಿನಲ್ಲಿರುವ ಫಸಲಿಗೆ ನೀರು ಹಾಯಿಸಲು ಚಾಸಾ-1 ರವರು ಚಾಸಾ-2, 3, 4, 5 ರವರ ಜೊತೆ ಹೋಗಿ ನೀರು ಹಾಯಿಸುತ್ತಿದ್ದಾಗ 1ನೇ ಆರೋಪಿಯಾದ ನೀವು ಸದರಿ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**329(3)** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, ಸದರಿ ಜಮೀನಿನಲ್ಲಿರುವ ಫಸಲಿಗೆ ನೀರು ಹಾಯಿಸಲು ಚಾಸಾ-1 ರವರು ಚಾಸಾ-2, 3, 4, 5 ರವರ ಜೊತೆ ಹೋಗಿ ನೀರು ಹಾಯಿಸುತ್ತಿದ್ದಾಗ 1ನೇ ಆರೋಪಿಯಾದ ನೀವು ಸದರಿ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಚಾಸಾ-1 ರವರನ್ನು

ಅಡ್ಡಗಟ್ಟಿ ಮುಂದಕ್ಕೆ ಹೋಗದಂತೆ ಪ್ರತಿಬಂಧಿಸಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**126(2)** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಬಾಯಿಗೆ ಬಂದಂತೆ ಬೇವರ್ಸಿಮುಂಡೆ ನನ್ನ ಜಮೀನಿನಲ್ಲಿ ನಿನಗೇನು ಕೆಲಸ ಎಂದು ಅವಾಚ್ಯ ಶಬ್ದಗಳಿಂದ ಬೈದಿದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**352** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 1 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋಂವುಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**115(2)** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**118(1)** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 1 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ರವರ ಮೈಕೈ ಮುಟ್ಟಿ ಹಿಡಿದು ಎಳೆದಾಡಿ ಅವರ ಗೌರವಕ್ಕೆ ಧಕ್ಕೆಯನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**74** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡಂತೆ, 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಈ ಬೇವರ್ಸಿ ಮುಂಡೇನ ಸುಮ್ಮನೆ ಬಿಡಬೇಡ ಹೊಡೆದು ಹಾಕು ಎಂದು 1 ನೇ ಆರೋಪಿಗೆ ಪ್ರಚೋದನೆ ಮಾಡಿ ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.**351(2)** ಸಹಕಲಂ.**3(5)** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ30.07.2026.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ30.07.2026

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ.

ಆರೋಪಿತರ ಸಹಿಃ